ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ, ಮಂಗಳೂರು

# ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ

PILIKULA DVELOPMENT AUTHORITY, MANGALURU

# PILIKULA REGIONAL SCIENCE CENTRE

## ವರದಿ

# ಪಿಲಿಕುಳದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ

### ‘ಭಾರತದ ಪಾರಮ್ಯಕ್ಕೆ ಸಿದ್ಧರಾಗಿ’ ‘ವಿಕಸಿತ ಭಾರತಕ್ಕೆ ಪ್ರಯತ್ನಿಸೋಣ’

ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ – 2024ನ್ನು ‘ವಿಕಸಿತ ಭಾರತಕ್ಕೆ ದೇಶೀಯ ತಂತ್ರಜ್ಞಾನಗಳು’ ಎಂಬ ಕೇಂದ್ರ ವಿಷಯದ ಮೇಲೆ ಆಯೋಜಿಸಲಾಗಿತ್ತು. ಎನ್.ಐ.ಟಿ.ಕೆ ಸುರತ್ಕಲ್ ಕಂಪ್ಯೂಟರ್ ವಿಭಾಗದ ಪ್ರೊ॥ ಶಶಿಧರ್. ಜಿ. ಕೂಲಗುಡಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ಹಿಂದಿನಿಂದಲೂ ವಿಕಸಿತ ಭಾರತಕ್ಕಾಗಿ ಪ್ರಯತ್ನಗಳು ನಡೆಯುತ್ತಿದ್ದವು. ಇಂದು ನಮ್ಮ ಭವಿಷ್ಯ ಉಜ್ವಲವಾಗಲು ಮುಂದಿನ ದಿನಗಳಲ್ಲಿ ಈ ಭರವಸೆ ಮೂಡಲು ಹಾಗೂ ಮುಂದುವರಿದ ದೇಶ ಎಂದು ಕರೆಯಲ್ಪಡಲು ಎಲ್ಲರೂ ಕೈಜೋಡಿಸಬೇಕು. ಅದರಲ್ಲೂ ವಿದ್ಯಾರ್ಥಿಗಳು ತಮ್ಮ ಕನಸಿನ ಭಾರತ ರೂಪಿಸಲು ಪಣತೊಡಬೇಕು ಎಂದು ಕರೆ ಕೊಟ್ಟರು.



ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಶ್ರೀ ಪ್ರವೀಣ ಬಿ. ನಾಯಕ್, ಪಿಲಿಕುಳದಲ್ಲಿ ನಡೆಯುವ ಯುವ ಕೇಂದ್ರಿತ ಕಾರ್ಯಕ್ರಮಗಳು ಇನ್ನೂ ಉತ್ತಮಗೊಳ್ಳಲು ಯೋಜನೆಗಳನ್ನು ರೂಪಿಸಲಾಗುತ್ತಿದೆ. ಇದಕ್ಕೆ ಸರ್ವರ ಸಹಕಾರ ಬೇಕು ಎಂದರು.

ವಿಜ್ಞಾನ ಕೇಂದ್ರದ ನಿರ್ದೇಶಕ, ಡಾ. ಕೆ. ವಿ. ರಾವ್ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ವಿಜ್ಞಾನ ತಂತ್ರಜ್ಞಾನದ ನಾಗಾಲೋಟದಲ್ಲಿ ಪಾಲ್ಗೊಳ್ಳಲು ನಮ್ಮ ವಿದ್ಯಾರ್ಥಿ ವೃಂದಕ್ಕೆ ಬೇಕಾಗುವ ತರಬೇತಿ, ಮನೋಭಾವ ರೂಪಿಸಲು ವಿಜ್ಞಾನ ದಿನಾಚರಣೆ ನಡೆಸಲಾಗುತ್ತಿದೆ. ಸರ್ ಸಿ. ವಿ. ರಾಮನ್‌ರವರ ಜೀವನದ ಆದರ್ಶಗಳು ಅನುಕರಣೀಯವಾಗಿದ್ದು ಅವರಂತಾಗಲು ಪ್ರಯತ್ನ ಪಡೋಣ ಎಂದರು.





ಶ್ರೀ ಜಗನ್ನಾಥ್ ಕಾರ್ಯಕ್ರಮ ನಿರೂಪಿಸಿದರು. ಶ್ರೀ ವಿಘ್ನೇಶ್ ಭಟ್ ಸ್ವಾಗತಿಸಿದರೆ ಶ್ರೀ ಶಿವರಾಮ್ ನಾಯ್ಕ್ ವಂದನಾರ್ಪಣೆಗೈದರು. ನಂತರ ಕೇಂದ್ರ ವಿಷಯದ ಮೇಲೆ ಡಾ। ಶಶಿಧರ್ ವಿಶೇಷ ಉಪನ್ಯಾಸ ನೀಡಿ ಭಾರತದಲ್ಲಿ ಪ್ರಾಚೀನ ಕಾಲದಿಂದ ವಿಜ್ಞಾನ ನಡೆದು ಬಂದ ದಾರಿ ಸ್ವಾತಂತ್ರ್ಯ ನಂತರದ ಸ್ವಾವಲಂಬಿ ಬೆಳವಣಿಗೆಗಳನ್ನು ಚಿತ್ರಿಸಿ ಆಹಾರ, ಇಂಧನ, ಮಿಲಿಟರಿ, ಸಂವಹನ, ಕಂಪ್ಯೂಟರ್, ಉಪಹ್ರಹ ಮುಂತಾದ ಕ್ಷೇತ್ರಗಳಲ್ಲಿ ಪಾರಮ್ಯ ಸಾಧಿಸಲಾಗಿದೆ. ಹೀಗೇ

ಮುಂದುವರಿಯುತ್ತಿದ್ದರೆ ಭವಿಷ್ಯ ಉಜ್ವಲವಾಗಿದೆ ಎಂಬ ಭರವಸೆ ಮೂಡುತ್ತಿದೆ. ವಿಜ್ಞಾನ ದಿನಾಚರಣೆ ಈ ವಿಶ್ವಾಸವನ್ನು ಯುವ ಜನರಲ್ಲಿ ಮೂಡಿಸಿ ಜಾಗತಿಕ ಮಟ್ಟದಲ್ಲಿ ಭಾರತ ಮೊದಲನೆಯ ಸ್ಥಾನಕ್ಕೇರುವಂತಾಗಲಿ ಎಂದು ಆಶಿಸಿದರು.






ಕಾರ್ಯಕ್ರಮದ ಅಂಗವಾಗಿ ಕೇಂದ್ರ ವಿಷಯದ ಮೇಲೆ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಚಿತ್ರಕಲೆ, ಆಶುಭಾಷಣ, ಪ್ರಬಂಧ ಮತ್ತು ರಸಪ್ರಶ್ನೆ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

ಸಮಾರೋಪ ಸಮಾರಂಭದಲ್ಲಿ ಶ್ರೀ ಪ್ರವೀಣ ಬಿ. ನಾಯಕ್, ಡಾ॥ಕೆ ವಿ ರಾವ್, ಚಂದ್ರಶೇಖರ್ ಶೆಟ್ಟಿ, ಶ್ರೀ ರಾಮಕೃಷ್ಣ ಮರಾಟಿ ಉಪಸ್ಥಿತರಿದ್ದರು.





ಡಾ। ಚಂದ್ರಶೇಖರ್ ಶೆಟ್ಟಿ ಹಾಗೂ ಶ್ರೀ ರಾಮಕೃಷ್ಣ ಮರಾಟಿ ಇವರು ತೀರ್ಪುಗಾರರ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ವಿದ್ಯಾರ್ಥಿಗಳು ದಿನದ ಕಾರ್ಯಕ್ರಮದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡು ಸಂತಸ ವ್ಯಕ್ತಪಡಿಸಿದರು. ಸ್ಪರ್ಧೆಗಳ ವಿಜೇತರಿಗೆ ಬಹುಮಾನ ಮತ್ತು ಪ್ರಶಂಸಾ ಪತ್ರಗಳನ್ನು ನೀಡಲಾಯಿತು.